**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ</u>**

**ಸಿ.ಸಿ.ನಂಃ 365/2022**

| | | |
|---|---|---|
| ಪಿರ್ಯಾರ್ದುದಾರಃ | 1. | ಕರ್ನಾಟಕ ಸರ್ಕಾರದ ಪರ<br>ಜೇವರ್ಗಿ ಪೋಲಿಸರು |
| | | ವಿರುದ್ಧ |
| ಆರೋಪಿತರು | 1. | ಈರಣ್ಣ ತಂದೆ ಕಾಶೀನಾಥ ಸುತ್ತಾರ,<br>ವಃ 43 ವರ್ಷ, ಉಃ ಒಕ್ಕಲುತನ,<br>ವಾಸಃ ಜನಿವಾರ, ತಾಃ ಜೇವರ್ಗಿ, ಜಿಃ ಕಲಬುರಗಿ. |
| | 2. | ನಾಗಣ್ಣಾ ತಂದೆ ಕಾಶೀನಾಥ ಸುತ್ತಾರ,<br>ವಃ 50 ವರ್ಷ, ಉಃ ಒಕ್ಕಲುತನ,<br>ವಾಸಃ ಜನಿವಾರ, ತಾಃ ಜೇವರ್ಗಿ, ಜಿಃ ಕಲಬುರಗಿ. |

**<u>ದಂಡ ಪ್ರಕ್ರಿಯಾ ಸಂಹಿತೆ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>**

**ಪ್ರಶ್ನೆ 1:** ಈ ಮೊಕದ್ದಮೆಯಲ್ಲಿ ವಿಚಾರಣೆಯಾದ ಸಾಕ್ಷಿದಾರರ ಪ್ರಮಾಣ ಪೂರ್ವಕ ಸಾಕ್ಷ್ಯವನ್ನು ನೀವು ಕೇಳಿದ್ದೀರಾ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 2: ಪ್ರಾಸಾ 4. ಸೋಮನಗೌಡ**ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13-02-2022ರಂದು ಬೆಳಿಗ್ಗೆ 11-30 ಗಂಟೆ ಸುಮಾರಿಗೆ ದೂರುದಾರರಾದ ದೇವಕಿ ಗಂಡ ಕಾಶಿನಾಥ ಸುತಾರ್ ಸಾಃ ಜನಿವಾರರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಸದರಿ ದೂರಿನ ಆಧಾರದ ಮೇಲೆ ಜೇವರ್ಗಿ ಗು.ನಂ.43/2022 ರಂತೆ ಭಾ.ದಂ.ಸಂ.323, 324, 341, 504, 506, 109 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಹಾಗೂ ದೂರನ್ನು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಅದೇ ದಿನ ಸಾಯಂಕಾಲ 05-00 ರಿಂದ 06-00 ಗಂಟೆ ಸಮಯಕ್ಕೆ ಗುನ್ನ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಯಲ್ಲಾಲಿಂಗ ಹಾಗೂ ಬಸಲಿಂಪ್ಪರವರ ಸಮಕ್ಷಮ ಗುನ್ನ ಸ್ಥಳದ ಪಂಚನಾಮೆ ಜರುಗಿಸಿ 3 ಫೀಟು ಉದ್ದದ ಬಡಿಗೆಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆಂದು ಹಾಗೂ ಅದೇ ದಿನ ಚಾಸಾ-4 ಸಿದ್ರಾಮಪ್ಪ ಮತ್ತು ಚಾಸಾ-5 ನಿರ್ಮಲಾರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 3: ಪ್ರಾಸಾ 4. ಸೋಮನಗೌಡ**ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 02-06-2022 ರಂದು ಜೇವರ್ಗಿಯ ಸರಕಾರಿ ಆಸ್ಪತ್ರೆಯಿಂದ ಚಾಸಾ-1, 4ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆಂದು ಹಾಗೂ ದಿನಾಂಕ 20-03-2022, 05-04-2022, 12-05-2022ರಂದು ಆರೋಪಿತರ ಪತ್ತೆಗಾಗಿ ಠಾಣಾ ಸಿಬ್ಬಂದಿ ಚಾಸಾ-6 ಶಿವಲಿಂಗಪ್ಪರವರನ್ನು ನಿಯೋಜಿಸಿರುತ್ತೇನೆಂದು ಹಾಗೂ ಚಾಸಾ-6ರವರು ಆರೋಪಿತರು ಪತ್ತೆಯಾಗದ ಬಗ್ಗೆ ವರದಿಗಳನ್ನು ಸಲ್ಲಿಸಿರುತ್ತಾರೆಂದು ಹಾಗೂ ಪ್ರಕಣದಲ್ಲಿ ತನಿಖೆ ಪೂರ್ಣಗೊಳಿಸಿ ದಿನಾಂಕ 06-06-2022ರಂದು ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಹಾಗೂ ಪಂಚನಾಮೆ ಸಮಯದಲ್ಲಿ ಜಪ್ತಿಪಡಿಸಿಕೊಂಡ ನ್ಯಾಯಾಲಯದ ಮುಂದಿರುವ ಬಡಿಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 4: ಪ್ರಾಸಾ 5 ಶಿವಲಿಂಗಪ್ಪ**ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20-03-2022ರಂದು ಜೇವರ್ಗಿ ಪೋಲಿಸ ಠಾಣೆಯ ಗುನ್ನೆ ನಂ.43/2022ರ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಸೋಮಣ್ಣಗೌಡರವರು ಪ್ರಕರಣದಲ್ಲಿನ ಆರೋಪಿತರಾದ ಈರಣ್ಣ ಸುತಾರ್ ಮತ್ತು ನಾಗಣ್ಣ ಸುತಾರರವರ ಪತ್ತೆ ಕುರಿತು ತನ್ನನ್ನು ನಿಯೋಜಿಸಿರುತ್ತಾರೆಂದು ಹಾಗೂ ಅದೆ ದಿನ ಆರೋಪಿತರ ಪತ್ತೆಗಾಗಿ ಜನಿವಾರ, ಗೌನಳ್ಳಿ, ಮಂದರವಾಡ ಮತ್ತು ಬಣಮಿ ಗ್ರಾಮಗಳಿಗೆ ಭೇಟಿಯಾಗಿ ಪೊಲೀಸ್ ಬಾತ್ಮಿದಾರರನ್ನು ಆರೋಪಿತರ ಬಗ್ಗೆ ವಿಚಾರಣೆ ಮಾಡಿ ಆರೋಪಿತರ ಬಗ್ಗೆ ಯಾವುದೆ ಮಾಹಿತಿ ಸಿಗದ ಕಾರಣ ಸದರಿ ವಿಚಾರವಾಗಿ ತನಿಖಾಧಿಕಾರಿಗೆ ವರದಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 5: ಪ್ರಾಸಾ 5 ಶಿವಲಿಂಗಪ್ಪ**ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 05-04-2022 ರಂದು ಜನಿವಾರ, ಕೋಳಕೂರು, ರದ್ದೆವಾಡಿಗಿ, ಕೂಡಿ ಮತ್ತು ಕೋನ ಹಿಪ್ಪರಗಾ ಗ್ರಾಮಗಳಿಗೆ ಹಾಗೂ

ದಿನಾಂಕ 12-05-2022 ರಂದು ಜನಿವಾರ, ಅವರಾದ, ಶಖಾಪೂರ, ರೇವನೂರು ಮತ್ತು ಮಾವನೂರು ಗ್ರಾಮಗಳಿಗೆ ಭೇಟಿ ನೀಡಿ ಪೊಲೀಸ್ ಬಾತ್ಮಿದಾರರನ್ನು ವಿಚಾರಿಸಲಾಗಿ ಆರೋಪಿತರ ಬಗ್ಗೆ ಯಾವುದೆ ಮಾಹಿತಿ ಸಿಗದ ಕಾರಣ ಸದರಿ ವಿಚಾರವಾಗಿ ತನಿಖಾಧಿಕಾರಿಗೆ ವರದಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 6: ಪ್ರಾಸಾ 6. ಡಾಃ ಶಿವಶಂಕರರವರು** ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12-02-2022 ರಂದು ಸಾಯಂಕಾಲ 08-35 ಗಂಟೆಗೆ ಸಮಯದಲ್ಲಿ ಹಲ್ಲೆ ಹಿನ್ನೆಲೆಯಲ್ಲಿ ಚಾಸಾ-1 ದೇವಕಿರವರು ತನ್ನ ಮಗನೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು ಅವರನ್ನು ಪರೀಕ್ಷಿಸಲಾಗಿ ಚಾಸಾ-1ರವರ ಬಲ ಭುಜದ ಮೇಲೆ 4x2 ಸೆ.ಮೀ ಕಂದುಗಟ್ಟಿದ ಗಾಯವಿತ್ತು ಹಾಗೂ ಅದು ಕೆಂಪು ಬಣ್ಣದ್ದಾಗಿತ್ತು ಎಂದು ಹಾಗೂ ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು ಹಾಗೂ ಸದರಿ ಗಾಯದ ಅವಧಿ ಸುಮಾರು 2 ಗಂಟೆ ಒಳಗಿನ ಗಾಯವಾಗಿತ್ತು ಹಾಗೂ ಸದರಿ ಗಾಯ ಘನ ಮತ್ತು ಒರಟಾದ ವಸ್ತುವಿನಿಂದ ಆದಂತಹ ಗಾಯವಾಗಿತ್ತು ಎಂದು ಹಾಗೂ ತಾನು ಚಾಸಾ 1 ರವರಿಗೆ ಚಿಕಿತ್ಸೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 7: ಪ್ರಾಸಾ 6. ಡಾಃ ಶಿವಶಂಕರರವರು** ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಅದೇ ದಿನ ಸಾಯಂಕಾಲ 08-50 ಗಂಟೆಗೆ ಸಮಯದಲ್ಲಿ ಹಲ್ಲೆ ಹಿನ್ನೆಲೆಯಲ್ಲಿ ಚಾಸಾ-4 ಸಿದ್ರಾಮಪ್ಪರವರು ತನ್ನ ತಾಯಿಯೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು ಅವರನ್ನು ಪರೀಕ್ಷಿಸಲಾಗಿ ಚಾಸಾ-4ರವರ ಬಲ ತೊಡೆಯ ಮುಂಭಾಗದ ಮೇಲೆ 4x2 ಸೆ.ಮೀ ಕಂದುಗಟ್ಟಿದ ಗಾಯವಿತ್ತು ಹಾಗೂ ಎಡ ಕಾಲಿನ ಹೆಬ್ಬೆರಳಿಗೆ ಮೇಲೆ 2x1 ಸೆ.ಮೀ ರಕ್ತ ಹೆಪ್ಪುಗಟ್ಟಿದ ಗಾಯವಿತ್ತು ಎಂದು ಹಾಗೂ ಎಡ ಕಾಲಿನ 3, 4 ಮತ್ತು 5ನೇ ಬೆರಳಿಗೆ ಮುಟ್ಟಿದಾಗ ನೋವಿತ್ತು ಎಂದು ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು ಹಾಗೂ ಸದರಿ ಗಾಯಗಳ ಅವಧಿ ಸುಮಾರು 2 ಗಂಟೆ ಒಳಗಿನ ಗಾಯವಾಗಿತ್ತು ಎಂದು ಹಾಗೂ ಸದರಿ ಗಾಯಗಳು ಘನ ಮತ್ತು ಒರಟಾದ ವಸ್ತುವಿನಿಂದ ಆದಂತಹ ಗಾಯವಾಗಿತ್ತು ಎಂದು ಹಾಗೂ ತಾನು

ಚಾಸಾ 4 ರವರಿಗೆ ಚಿಕಿತ್ಸೆ ನೀಡಿರುತ್ತೇನೆಂದು ಹಾಗೂ ನ್ಯಾಯಾಲಯದ ಮುಂದಿರುವ ಮು.ಮಾ-1ರಂತಹ ಬಡಿಗೆಯಿಂದ ಹೊಡೆದರೆ ಮೇಲೆ ತಿಳಿಸಿದ ಗಾಯಗಳಾಗುವ ಸಾಧ್ಯತೆ ಇದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 8** ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 9** ಈ ಪ್ರಕರಣದಲ್ಲಿ ಯಾವುದಾದರೂ ನಿಮ್ಮ ಪರ ದಾಖಲಾತಿಗಳನ್ನು ಹಾಜರುಪಡಿಸುತ್ತೀರ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

**ಪ್ರಶ್ನೆಃ 10** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವದು ಇದೆಯಾ?

**1ನೇ ಆರೋಪಿಯ ಉತ್ತರಃ**

**2ನೇ ಆರೋಪಿಯ ಉತ್ತರಃ**

(ಮೇಲಿನ ಹೇಳಿಕೆಯನ್ನು ನನ್ನ ಸಮಕ್ಷಮ ನನ್ನಿಂದ ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಪ್ರಶ್ನೆಗಳನ್ನು ಓದಿ, ತಿಳಿಸಿ ಹೇಳಿದ್ದು, ಅವುಗಳನ್ನು ತಿಳಿದುಕೊಂಡು ಅವರು ಕೊಟ್ಟ ಉತ್ತರಗಳನ್ನು ಅವರಂತೆಯೇ ದಿನಾಂಕ 13-06-2025ರಂದು ದಾಖಲಿಸಿಕೊಳ್ಳಲಾಗಿದೆ)

ಜೇವರ್ಗಿ
13-06-2025

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

ಆಪಾದಿತರ ಸಹಿಃ